## 38. ಸ.ಕಿ.ಪ್ರಾ ಶಾಲೆ ಹಾಡೋನಹಳ್ಳಿ ಕಾಲೋನಿ

ಶಿವಮೊಗ್ಗ ತಾಲೂಕಿನ ಉತ್ತರ ಗಡಿಭಾಗದಲ್ಲಿರುವ ಹಾಡೋನಹಳ್ಳಿ ಗ್ರಾಮವು ಶಿವಮೊಗ್ಗ ನಗರದಿಂದ 25 ಕಿ.ಮೀ. ದೂರದಲ್ಲಿದ್ದು ಮೂಲತಹ ಕೃಷಿಕರನ್ನು ಮತ್ತು ಕೂಲಿ ಕಾರ್ಮಿಕರನ್ನು ಹೊಂದಿರುವ ಸ್ವಚ್ಚ ಗ್ರಾಮ. ಇಲ್ಲಿ ಒಂದು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಇದ್ದು ಇದೆ ಹಳ್ಳಿಯ ಪಶ್ಚಿಮ ದಿಕ್ಕಿಗಿರುವ ಹಾಡೋನಹಳ್ಳಿ ಆಶ್ರಯ ಕಾಲೋನಿ. ಈ ಶಾಲೆಯಿಂದ ಒಂದು ಕಿಮೀ ದೂರದಲ್ಲಿದ್ದು ಮಕ್ಕಳ ಶೈಕ್ಷಣಿಕ ಹಿತದೃಷ್ಠಿಯಿಂದ ಸರ್ಕಾರವು ಪ್ರಾರಂಭಿಸಿದ ಶಾಲೆಯೇ ಸಕಿಪ್ರಾ ಶಾಲೆ ಹಾಡೋನಹಳ್ಳಿ ಆಶ್ರಯ ಕಾಲೋನಿ ಶಾಲೆ. ಸುಮಾರು 30*100 ವಿಸ್ತೀರ್ಣದಲ್ಲಿ ಶಾಲಾ ಆವರಣ ಇದ್ದು ಸುಸಜ್ಜಿತ ಕಾಂಪೌಂಡ್, 2 ತರಗತಿ ಕೊಠಡಿ, ಅಡುಗೆ ಮನೆ, ದಾಸ್ತಾನು ಕೊಠಡಿ, ಉತ್ತಮ ಶೌಚಾಲಯ, ಶಾಲಾ ಕೈತೋಟವನ್ನು ಹೊಂದಿದ್ದು 1 ರಿಂದ 5ನೇ ತರಗತಿಯ ವರೆಗೆ ಒಟ್ಟು 22 ವಿದ್ಯಾರ್ಥಿಗಳು ದಾಖಲಾಗಿರುತ್ತಾರೆ. ಶ್ರೀ ತಿಮ್ಮಪ್ಪ ಎಸ್, ಶ್ರೀಮತಿ ರಂಗಮ್ಮ ಬಿ ಸಹ ಶಿಕ್ಷಕರು ಕರ್ತವ್ಯ ನಿರ್ವಹಿಸುತ್ತಿದ್ದಾರೆ.

1. ಉತ್ತಮವಾದ ಕಲಿಕೋಪಕರಣಗಳನ್ನು ನಲಿ ಕಲಿ ವಿಧಾನದಲ್ಲಿ ಬಳಸಲಾಗುತಿದೆ 2. ಉತ್ತಮವಾದ ಕಲಿಕಾ ಚಪ್ಪರವನ್ನು ನಿರ್ಮಿಸಿ ಮಕ್ಕಳು ತಯಾರಿಸಿರುವ ಕಲಿಕಾ ಪರಿಕರಗಳನ್ನು ಪ್ರದರ್ಶಿಸಲಾಗಿದೆ 3. ಉತ್ತಮವಾದ ಶಾಲಾ ಕೈತೋಟವನ್ನು ನಿರ್ಮಿಸಲಾಗಿದೆ. 4. ಮಕ್ಕಳಿಗೆ ಉತ್ತಮವಾದ ವಾಲ್ ಸ್ಲೇಟ್ ವ್ಯವಸ್ಥೆ ಗೊಳಿಸಲಾಗಿದೆ. 5. ಭಾಷಾ ಸಂಭಾಷಣೆಗೆ ಸಂಬಂಧಿಸಿದಂತೆ ಮುಖವಾಡಗಳನ್ನು ತಯಾರಿಸಲಾಗಿದೆ.

ಪ್ರಾರಂಭದ ದಿನಗಳಲ್ಲಿ ಕೆಲವು ಸಣ್ಣ ಪುಟ್ಟ ಸಮಸ್ಯೆಗಳನ್ನು ಈ ಮುಂದಿನಂತೆ ವಿವರಿಸಲಾಗಿದೆ. ಶಾಲಾ ಭೌತಿಕ ಪರಿಸರ ಆಕರ್ಷಣಿಯವಾಗಿಲ್ಲದಿರುವುದು, ಮಕ್ಕಳ ಮಾತೃ ಭಾಷೆ ಸಮಸ್ಯೆ(ತೆಲಗು), ಪೋಷಕರ ಅಸಹಕಾರ, ನಿರಾಸಕ್ತಿ. ಕುಡಿಯುವ ನೀರಿನ ಸಮಸ್ಯೆ, ಮಕ್ಕಳು ಕಲಿಕೆಯಲ್ಲಿ ತುಂಬಾ ಹಿಂದುಳಿದಿರುವುದು ಕಂಡುಬಂದಿತು.

ಶಾಲಾ ಆವರಣದಲ್ಲಿ ಉತ್ತಮವಾದ ಹೂವಿನ ಗಿಡಗಳು, ಹಣ್ಣಿನ ಗಿಡಗಳು, ತರಕಾರಿ ಸಸಿಗಳನ್ನು ಬೆಳೆಸುವುದರ ಮೂಲಕ ಉತ್ತಮವಾದ ಭೌತಿಕ ಪರಿಸರವನ್ನು ನಿರ್ಮಿಸಲಾಗಿದೆ. ಶಾಲಾ ಆವರಣವು ಶಾಲಾ ಕೈತೋಟದಿಂದ ಕಂಗೊಳಿಸುತ್ತಿದೆ. ಸಮುದಾಯದ ಸಹಕಾರದಿಂದ ಶಾಲೆಗೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಲಾಗಿದೆ. ಮಕ್ಕಳಿಗೆ ಕನ್ನಡ ಭಾಷೆ ಕಲಿಕೆ ಬಗ್ಗೆ ಹೆಚ್ಚಿನ ಪ್ರಾಮುಖ್ಯತೆ ನೀಡಿ, ಮಕ್ಕಳು ಕನ್ನಡ ಭಾಷಾ ಕಲಿಕೆಯಲ್ಲಿ ಪ್ರಬುದ್ಧರಾಗುವಂತೆ ತರಗತಿಯನ್ನ ನಿರ್ವಹಿಸಲಾಗುತ್ತಿದೆ. ಶಾಲಾ ಮಕ್ಕಳು ಕ್ಲಸ್ಟರ್ ಹಂತ, ತಾಲೂಕು ಹಂತ ಮತ್ತು ಜಿಲ್ಲಾ ಹಂತದ ಪ್ರತಿಭಾ ಕಾರಂಜಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಉತ್ತಮ ಸಾಧನೆ ಮಾಡಿರುತ್ತಾರೆ.

ಶ್ರೀ ಪ್ರಸಾದ ಇವರು ಶಾಲೆಗೆ ಅಕ್ಷರ ದಾಸೋಹಕ್ಕೆ ತಟ್ಟೆ, ಲೋಟಗಳನ್ನು ನೀಡಿರುತ್ತಾರೆ. 2. ಶ್ರೀ ಪ್ರಶಾಂತ ನಾಮನಿರ್ದೇಶಿತ ಸದಸ್ಯರು ಎಸ್.ಡಿ.ಎಂ.ಸಿ, ಇವರು ಶಾಲೆಗೆ 15,000/- ರೂ.ಗಳನ್ನು ನಲಿಕಲಿ ತರಗತಿಗೆ ರೌಂಡ್ ಟೇಬಲ್ಗಳನ್ನು ವ್ಯವಸ್ಥೆ ಮಾಡಲು ನೀಡಿರುತ್ತಾರೆ. ಗ್ರಾಮ ಪಂಚಾಯತಿ ಹಾಡೋನಹಳ್ಳಿ ಇವರ ವತಿಯಿಂದ ಶಾಲೆಗೆ 4 ಡೆಸ್ಕುಗಳನ್ನು, 20 ಚೇರ್‌ಗಳನ್ನು ಪಡೆಯಲಾಗಿದೆ.

ಶಾಲೆಯಲ್ಲಿ ಪ್ರತಿ ವರ್ಷ ರಾಷ್ಟ್ರೀಯ ಹಬ್ಬಗಳಲ್ಲಿ ಸ್ವಾತಂತ್ರ್ಯ ಹೋರಾಟಗಾರರ ವೇಷ ಭೂಷಣ ಧರಿಸಿ ಮಕ್ಕಳಿಂದ ಮೆರವಣಿಗೆ ಮತ್ತು ಸ್ವಚ್ಛತೆ, ಶಿಕ್ಷಣದ ಮಹತ್ವ, ರಾಷ್ಟ್ರೀಯ ಭಾವೈಕ್ಯತೆ ಬಗ್ಗೆ ಜಾಗೃತಿ ಮೂಡಿಸುವ ಜಾತ ಕಾರ್ಯಕ್ರಮವನ್ನು ಹಮ್ಮಿ ಕೊಳ್ಳಲಾಗುತ್ತದೆ. ಪ್ರತಿ ವರ್ಷ ಪ್ರತಿಭಾ ಕಾರಂಜಿಯಲ್ಲಿ ಶಾಲಾ ಮಕ್ಕಳು ಉತ್ತಮವಾದ ಸಾಧನೆ ಮಾಡಿರುತ್ತಾರೆ.






